# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **1100**
ಮಾನ್ಯ ಸದಸ್ಯರ ಹೆಸರು : **ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**
ಉತ್ತರಿಸುವ ದಿನಾಂಕ : 22.09.2022
ಉತ್ತರಿಸುವವರು : ಮುಖ್ಯಮಂತ್ರಿ

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ವಿಧಾನಸೌಧದ ಒಳಗಿನ ಬ್ಯಾಂಕೆಟ್ ಹಾಲ್ ಸಭಾಂಗಣದಲ್ಲಿ ಯಾವ ಯಾವ ರೀತಿಯ ಕಾರ್ಯಕ್ರಮಗಳನ್ನು ಆಯೋಜಿಸಲು ಅವಕಾಶ ನೀಡಲಾಗುವುದು; (ವಿವರ ನೀಡುವುದು) | ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಸಚಿವರುಗಳ ಅಧ್ಯಕ್ಷತೆಯಲ್ಲಿ ನಡೆಯುವ ಇಲಾಖಾ ಸರ್ಕಾರಿ ಕಾರ್ಯ ಕ್ರಮಗಳನ್ನು ಆಯೋಜಿಸಲು ಅವಕಾಶ ನೀಡಲಾಗುತ್ತಿದೆ. |
| ಆ) | ಸದರಿ ಕಾರ್ಯ ಕ್ರಮಗಳನ್ನು ಆಯೋಜಿಸುವವರಿಂದ ಇಂತಿಷ್ಟು ಹಣ ಎಂದು ಪಡೆಯಲಾಗುವುದೇ; ಇದ್ದಲ್ಲಿ, ಅದರ ವಿವರ ನೀಡುವುದು: | ಮಾನ್ಯ ಮುಖ್ಯ ಮಂತ್ರಿಗಳ ಹಾಗೂ ಸಚಿವರುಗಳ ಅಧ್ಯಕ್ಷತೆಯಲ್ಲಿ ನಡೆಯುವ ಇಲಾಖಾ ಸರ್ಕಾರಿ ಕಾರ್ಯ ಕ್ರಮಗಳಿಗೆ ಬ್ಯಾಂಕೆಟ್ ಹಾಲ್‌ನ ಸ್ವಚ್ಚತಾ ವೆಚ್ಚ ರೂ.50,000/-ಗಳು ವಿಧಾನಸೌಧದ ಆವರಣದಲ್ಲಿ ಊಟದ ವ್ಯವಸ್ಥೆ ಮಾಡಿದಲ್ಲಿ ಸ್ವಚ್ಚತಾ ವೆಚ್ಚ ರೂ.5,000/-ಗಳನ್ನು ಪಡೆಯಲಾಗುತ್ತದೆ.<br><br>ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಸ್ಥಾಪಿಸಲ್ಪಟ್ಟ ನಿಗಮ/ಮಂಡಳಿ ಮತ್ತಿತರ ಸ್ವಾಯತ್ತ ಸಂಸ್ಥೆಗಳಿಂದ ಕಾರ್ಯಕ್ರಮ ಆಯೋಜಿಸಿದಲ್ಲಿ ಬ್ಯಾಂಕೆಟ್ ಹಾಲ್ ನ ಶುಲ್ಕ ರೂ.1,00,000/-ಗಳು, ಸ್ವಚ್ಚತಾ ವೆಚ್ಚ ರೂ.50,000/-ಗಳನ್ನು ಹಾಗೂ ವಿಧಾನಸೌಧದ ಆವರಣದಲ್ಲಿ ಊಟದ ವ್ಯವಸ್ಥೆ ಮಾಡಿದಲ್ಲಿ ಸ್ವಚ್ಚತಾ ವೆಚ್ಚ ರೂ.5,000/-ಗಳನ್ನು ಪಡೆಯಲಾಗುತ್ತದೆ. |
| ಇ) | ಸದರಿ ಕಾರ್ಯ ಕ್ರಮಗಳನ್ನು ನಡೆಸುವಾಗ ಬ್ಯಾಂಕೆಟ್ ಹಾಲ್ ಅಕ್ಕಪಕ್ಕದಲ್ಲಿ ಉಪಾಹಾರ ಮತ್ತು ಭೋಜನದ ವಿತರಣೆ ಇತ್ಯಾದಿಗಳ ಸಲುವಾಗಿ ತಾತ್ಕಾಲಿಕವಾಗಿ ಟೆಂಟ್‌ಗಳನ್ನು ಅಳವಡಿಸಲಾಗುವುದೇ; ಅಳವಡಿಸಿದ್ದಲ್ಲಿ, ಯಾವ ಮೂಲಕ ಅಳವಡಿಸಲಾಗುವುದು; ಈ ಅಳವಡಿಕೆಗೆ ಸಂಬಂಧಪಟ್ಟ ಇಲಾಖೆ ಅಥವಾ ಆಯೋಜಕರು ಹಣ ಪಾವತಿಸುವರೇ; | ಹೌದು.<br><br>ಮಾನ್ಯ ಮುಖ್ಯ ಮಂತ್ರಿಯವರ ಅಧ್ಯಕ್ಷತೆಯಲ್ಲಿ ನೇರವಾಗಿ ನಡೆಯುವ ಕಾರ್ಯಕ್ರಮಕ್ಕೆ ಸರ್ಕಾರದ ಅಧಿಕೃತ ಗುತ್ತಿಗೆದಾರರಿಂದ ತಾತ್ಕಾಲಿಕ ಟೆಂಟ್‌ನ್ನು ಹಾಗೂ ಇಲಾಖೆಯ ಕಾರ್ಯಕ್ರಮವಾದಲ್ಲಿ ಆಯಾಯ ಇಲಾಖೆಯ ವತಿಯಿಂದ ಅಳವಡಿಸಲಾಗುತ್ತದೆ ಹಾಗೂ ಆಯಾ ಇಲಾಖೆಯ ವತಿಯಿಂದಲೇ ಹಣ ಪಾವತಿಸಲು ಕ್ರಮ ವಹಿಸಲಾಗುತ್ತದೆ. |
| ಈ) | ಟೆಂಟ್‌ಗಳ ಅಳವಡಿಕೆಗೆ ಇಂತಿಷ್ಟು ಅಡಿ ಅಥವಾ ಮೀಟರ್ ಅಥವಾ ವಿಸ್ತೀರ್ಣವಾರು ಎಂದು ನಿಗದಿಪಡಿಸಿರುವ ಹಣವೆಷ್ಟು; (ವಿವರವನ್ನು ನೀಡುವುದು: ಕಳೆದ | ಸರ್ಕಾರದಿಂದ ಏರ್ಪಡಿಸಲಾಗುವ ಕಾರ್ಯಕ್ರಮಗಳಿಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ವತಿಯಿಂದ ಇ-ಟೆಂಡರ್ ಮೂಲಕ ಅಧಿಕೃತ ಗುತ್ತಿಗೆದಾರರನ್ನು ಆಯ್ಕೆ ಮಾಡಲಾಗಿದ್ದು, ಟೆಂಟ್‌ಗಳ ಅಳವಡಿಕೆ ಕುರಿತು ಈ |



Generated from eOffice by G JAGADEESHA, CMO-JS(GJ), JOINT SECREATRY, CMO on 20/09/2022 02:28 PM

| | | |
|---|---|---|
| | 2021-2022ನೇ ಸಾಲಿನಲ್ಲಿ ಬ್ಯಾಂಕ್ವೆಟ್ ಹಾಲ್‌ನ ಹೊರಗಿನ ಎರಡೂ ಭಾಗಗಳಲ್ಲಿ ಟೆಂಟ್‌ಗಳನ್ನು ಅಳವಡಿಸಿರುವ ಕಾರ್ಯ ಕ್ರಮಗಳ ವಿವರ ಮತ್ತು ಟೆಂಟ್‌ಗಳಿಗೆ ಬಾಡಿಗೆ ಸಲುವಾಗಿ ಪಾವತಿಸಿರುವ ಮೊತ್ತವೆಷ್ಟು: (ವಿವರವನ್ನು ಕಾರ್ಯಕ್ರಮವಾರು ನೀಡುವುದು) | ಕೆಳಕಂಡಂತೆ ವಾರ್ಷಿಕ ದರ ಗುತ್ತಿಗೆಯನ್ನುನಿಗಧಿಪಡಿಸಲಾಗಿದೆ.<br><br>1. ಶಾಮಿಯಾನ (ಆರ್ಡಿನರಿ) ಚದರಡಿಗೆ-ರೂ.0.10<br>2. ಪೈಪ್ ಶಾಮಿಯಾನ ಚದರಡಿಗೆ-ರೂ.0.10<br>3. ಜರ್ಮನ್ ಹ್ಯಾಂಗರ್ ವಾಟರ್ ಪ್ರೂಫ್ ಚದರಡಿಗೆ-ರೂ.54.00<br>ಇತರೆ ಕ್ಷೇತ್ರ ಇಲಾಖೆಗಳ ವತಿಯಿಂದ ಆಯೋಜಿಸಲ್ಪಡುವ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಆಯಾಯ ಇಲಾಖೆಗಳೇ ಟೆಂಟ್‌ಗಳನ್ನು ಅಳವಡಿಸಲು ದರವನ್ನು ನಿಗದಿಪಡಿಸಿಕೊಂಡಿರುತ್ತದೆ.<br><br>2021-22ನೇ ಸಾಲಿನಲ್ಲಿ ಮಾನ್ಯ ಮುಖ್ಯಮಂತ್ರಿಯವರ ಸಚಿವಾಲಯದಿಂದ ಆಯೋಜಿಸಲ್ಪಟ್ಟ ಕಾರ್ಯಕ್ರಮಕ್ಕೆ ಸಿಆಸು (ಕಾರ್ಯಕಾರಿ) ಇಲಾಖೆಯಿಂದ ಬ್ಯಾಂಕ್ವೆಟ್ ಹಾಲ್‌ನ ಎರಡೂ ಭಾಗಗಳಲ್ಲಿ ಟೆಂಟ್‌ಗಳನ್ನು ಅಳವಡಿಸಿದ್ದು, ಆ ಕುರಿತಂತೆ ಪಾವತಿಸಿರುವ ಬಿಲ್ಲಿನ ಮೊತ್ತದ ವಿವರವನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.<br><br>ಇತರೆ ಕ್ಷೇತ್ರ ಇಲಾಖೆಗಳಿಂದ ಕಾರ್ಯಕ್ರಮಗಳನ್ನು ಆಯೋಜಿಸಿದಲ್ಲಿ ಆಯಾಯ ಕ್ಷೇತ್ರ ಇಲಾಖೆಗಳು ಹಣ ಪಾವತಿಸುವ ಬಗ್ಗೆ ಕ್ರಮವಹಿಸುತ್ತವೆ. ಆಯೋಜಿಸಲಾಗಿರುವ ಕಾರ್ಯಕ್ರಮಗಳ ವಿವರಗಳನ್ನು **ಅನುಬಂಧ - 2** ರಲ್ಲಿ ನೀಡಲಾಗಿದೆ. |
| ಉ) | ಟೆಂಟ್‌ಗಳ ಅಳವಡಿಕೆಗೆ ಸರ್ಕಾರದಿಂದ ಹೆಚ್ಚಿನ ಹಣ ಪಾವತಿಸುತ್ತಿದ್ದಲ್ಲಿ ಸರ್ಕಾರಕ್ಕೆ ನಷ್ಟವಾಗುತ್ತಿರುವುದನ್ನು ತಪ್ಪಿಸಿ, ಶಾಶ್ವತ ಟೆಂಟ್ ಹೌಸ್ ನಿರ್ಮಾಣ ಅಥವಾ ಸರ್ಕಾರದ ವತಿಯಿಂದ ಟೆಂಟ್‌ಗಳನ್ನು ಖರೀದಿಸಿ, ಸಿಬ್ಬಂದಿ ಮೂಲಕ ನಿರ್ವಹಣೆ ಮಾಡಿಕೊಂಡು ಸರ್ಕಾರಕ್ಕೆ ಲಾಭ ತರುವ ದಿಸೆಯಲ್ಲಿ ಕೈಗೊಳ್ಳುವ ಕ್ರಮವೇನು? (ವಿವರಗಳನ್ನು ನೀಡುವುದು) | ಪ್ರಸ್ತಾವನೆ ಇರುವುದಿಲ್ಲ. |

ಕಡತ ಸಂಖ್ಯೆ:ಸಿಆಸುಇ **196** ಡಿಸಭೆ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ



Generated from eOffice by G JAGADEESHA, CMO-JS(GJ), JOINT SECREATRY, CMO on 20/09/2022 02:28 PM

# ಅನುಬಂಧ-1

**2021-2022ನೇ ಸಾಲಿನಲ್ಲಿ ಬ್ಯಾಂಕ್ವೆಟ್ ಹಾಲ್‌ನ ಎರಡೂ ಭಾಗಗಳಲ್ಲಿ ಟೆಂಟ್‌ಗಳನ್ನು/ ಸಿಆಸುಇ (ಕಾರ್ಯಕಾರಿ) ಯಿಂದ ಅಳವಡಿಸಿರುವ ಕಾರ್ಯಕ್ರಮಗಳ ವಿವರ**

| ಕ್ರ.ಸಂ | ಇಲಾಖೆ | ಕಾರ್ಯಕ್ರಮದ ವಿವರ | ಪಾವತಿಸಿರುವ ವೆಚ್ಚ |
|---|---|---|---|
| 1. | ಸಿಆಸುಇ (ಕಾರ್ಯಕಾರಿ) | ದಿನಾಂಕ: 22.03.2022 ರಂದು ನಡೆದ ಮಾನ್ಯ ಮುಖ್ಯ ಮಂತ್ರಿಯವರ ಭೋಜನ ಕೂಟ ಕಾರ್ಯಕ್ರಮ. | 9,50,400/- |

# ಅನುಬಂಧ-2

**2021-2022ನೇ ಸಾಲಿನಲ್ಲಿ ಬ್ಯಾಂಕ್ವೆಟ್ ಹಾಲ್‌ನ ಎರಡೂ ಭಾಗಗಳಲ್ಲಿ ಟೆಂಟ್‌ಗಳನ್ನು/ ಇತರೆ ಇಲಾಖೆಗಳಿಂದ ಅಳವಡಿಸಿರುವ ಕಾರ್ಯಕ್ರಮಗಳ ವಿವರ.**

| ಕ್ರ. ಸಂ | ಇಲಾಖೆ | ಕಾರ್ಯಕ್ರಮದ ವಿವರ |
|---|---|---|
| **2.** | ಇತರೆ ಇಲಾಖೆಗಳು | 1. ದಿನಾಂಕ: 10.03.2022 ರಂದು ನಡೆದ ಮಾನ್ಯ ಕಂದಾಯ ಸಚಿವರು ಏರ್ಪಡಿಸಿರುವ ಭೋಜನ ಕೂಟ ಕಾರ್ಯಕ್ರಮ.<br>2. ದಿನಾಂಕ: 15.03.2022 ರಂದು ನಡೆದ ಮಾನ್ಯ ಬೃಹತ್ ಮತ್ತು ಕೈಗಾರಿಕಾ ಸಚಿವರು ಏರ್ಪಡಿಸಿರುವ ಭೋಜನ ಕೂಟ ಕಾರ್ಯಕ್ರಮ.<br>3. ದಿನಾಂಕ: 16.03.2022 ರಂದು ನಡೆದ ಮಾನ್ಯ ಜಲ ಸಂಪನ್ಮೂಲ ಸಚಿವರು ಏರ್ಪಡಿಸಿರುವ ಭೋಜನ ಕೂಟ ಕಾರ್ಯಕ್ರಮ.<br>4. ದಿನಾಂಕ: 23.03.2022 ರಂದು ನಡೆದ ಮಾನ್ಯ ಆರೋಗ್ಯ ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು ಏರ್ಪಡಿಸಿರುವ ಭೋಜನ ಕೂಟ ಕಾರ್ಯಕ್ರಮ.<br>5. ದಿನಾಂಕ: 24.03.2022 ರಂದು ನಡೆದ ಮಾನ್ಯ ನಿಕಟ ಪೂರ್ವ ಮುಖ್ಯ ಮಂತ್ರಿಯವರು ಏರ್ಪಡಿಸಿರುವ ಭೋಜನ ಕೂಟ ಕಾರ್ಯಕ್ರಮ.<br>6. ದಿನಾಂಕ: 28.03.2022 ರಂದು ನಡೆದ ಮಾನ್ಯ ಕೃಷಿ ಸಚಿವರು ಏರ್ಪಡಿಸಿರುವ ಭೋಜನ ಕೂಟ ಕಾರ್ಯಕ್ರಮ.<br>7. ದಿನಾಂಕ: 29.03.2022 ರಂದು ನಡೆದ ಮಾನ್ಯ ಲೋಕೋಪಯೋಗಿ ಸಚಿವರು ಏರ್ಪಡಿಸಿರುವ ಭೋಜನ ಕೂಟ ಕಾರ್ಯಕ್ರಮ. |